QP CODE: 30630

ಆರನೆಯ ಸೆಮಿಸ್ಟರ್ ಬಿ.ಎ. ಪದವಿ ಪರೀಕ್ಷೆ, ಮೇ / ಜೂನ್, 2026

(ಎನ್‌ಇಪಿ ಸ್ಕೀಂ)

ಕನ್ನಡ ಐಚ್ಛಿಕ ಪತ್ರಿಕೆ - 12

(NAF 0500) ಅನಿಕೇತನ - 6

ಪ್ರಾಚೀನ ಕನ್ನಡ ಸಾಹಿತ್ಯ

ಅವಧಿ : 2 ಗಂಟೆಗಳು ಗರಿಷ್ಠ ಅಂಕಗಳು : 60

ವಿದ್ಯಾರ್ಥಿಗಳಿಗೆ ಸೂಚನೆಗಳು:

1. ವಿದ್ಯಾರ್ಥಿಯು ವಿಭಾಗ ಸಂಖ್ಯೆ ಹಾಗೂ ಪ್ರಶ್ನೆ ಸಂಖ್ಯೆಗಳನ್ನು ಸ್ಪಷ್ಟವಾಗಿ ಮಾರ್ಜಿನ್ ಗೆರೆಯ ಒಳಗೆ ಬರೆಯಬೇಕು.
2. ವಿಭಾಗ ಸಂಖ್ಯೆ ಹಾಗೂ ಪ್ರಶ್ನೆ ಸಂಖ್ಯೆಗಳನ್ನು ನಮೂದಿಸದೇ ಇರುವ ಉತ್ತರಗಳನ್ನು ಮೌಲ್ಯಮಾಪನ ಮಾಡಲಾಗುವುದಿಲ್ಲ.
3. ವಿಭಾಗ - I ರಲ್ಲಿನ ಬಹು ಆಯ್ಕೆಯ ಪ್ರಶ್ನೆಗಳಿಗೆ ಉತ್ತರವನ್ನು ಉತ್ತರ ಪತ್ರಿಕೆಯ ಮೊದಲ ಪುಟದಲ್ಲಿ ಬರೆಯಬೇಕು ಹಾಗೂ ಅದೇ ಪ್ರಶ್ನೆಗಳಿಗೆ ಉತ್ತರವನ್ನು ಪುನರಾವರ್ತಿಸಬಾರದು.
4. ಪ್ರಶ್ನೆ ಪತ್ರಿಕೆಯಲ್ಲಿನ ವಿಭಾಗ - I ರಲ್ಲಿನ ಬಹು ಆಯ್ಕೆಯ ಪ್ರಶ್ನೆಗಳಿಗೆ ನೀಡಲಾದ ಆಯ್ಕೆ ಉತ್ತರಗಳ (Options) ಮೇಲೆ ಯಾವುದೇ ರೀತಿಯ ಗುರುತು ಸೂಚಕ ಚಿಹ್ನೆಗಳಾದ ವೃತ್ತ ಹಾಕುವುದು, ಚುಕ್ಕೆ ಇಡುವುದು, ಸರಿ ಗುರುತು ಮಾಡುವುದು (✓) ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಲಾಗಿದೆ. ಪ್ರಶ್ನೆ ಪತ್ರಿಕೆಯ ಮೇಲೆ (ನೋಂದಣಿ ಸಂಖ್ಯೆಯನ್ನು ಹೊರತುಪಡಿಸಿ) ಬೇರೆ ಯಾವುದೇ ತರಹದ ಬರವಣಿಗೆಗಳನ್ನು ಮಾಡಬಾರದು.

ವಿಭಾಗ - I

I. ಈ ಕೆಳಗಿನ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. **(10x1=10)**

I-1. ಪ್ರಭುತ್ವ ಎಂದರೆ
(ಅ) ಆಧಿಪತ್ಯ (ಆ) ರಾಜತ್ವ (ಇ) ಕೇಂದ್ರ (ಈ) ಅಧಿಕಾರಿ ವರ್ಗ

I-2. ಕನ್ನಡದ ಮೊದಲ ಅಲಂಕಾರಿಕ ಗ್ರಂಥ
(ಅ) ಸಾಹಸಭೀಮ ವಿಜಯ (ಆ) ಆದಿ ಪುರಾಣ
(ಇ) ಕವಿರಾಜಮಾರ್ಗ (ಈ) ಪಂಪಭಾರತ

I-3. ರನ್ನಕವಿ ತನ್ನ ಸಾಹಸಭೀಮ ವಿಜಯ ಕೃತಿಯಲ್ಲಿ ಸತ್ಯಾಶ್ರಯ ಇರವಬೆಡಂಗನನ್ನು ಯಾರೊಂದಿಗೆ ಸಮೀಕರಿಸಿದ್ದಾರೆ?
(ಅ) ಅರ್ಜುನ (ಆ) ಭೀಮ (ಇ) ದುರ್ಯೋಧನ (ಈ) ಧರ್ಮರಾಯ

I-4. 'ಸುಪುತ್ರಿ ಕುಲದೀಪಿಕೆ' ಎಂಬ ಸಾಲು ಇರುವ ಶಾಸನ.
(ಅ) ಹಲ್ಮಿಡಿ ಶಾಸನ (ಆ) ಬಾದಾಮಿ ಶಾಸನ (ಇ) ಚನ್ನಪಟ್ಟಣ ಶಾಸನ (ಈ) ತಾಳಗುಂದ ಶಾಸನ

I-5. ಅಮೋಘವರ್ಷ ನೃಪತುಂಗನ ಆಶ್ರಯದಲ್ಲಿದ್ದ ಕವಿ
(ಅ) ಪಂಡಿತ (ಆ) ಲೋಕಪಾಲ (ಇ) ರನ್ನ (ಈ) ಶ್ರೀವಿಜಯ

I-6. ಜೈನಧರ್ಮದ ಹದಿನಾಲ್ಕನೇ ತೀರ್ಥಂಕರ
(ಅ) ಅನಂತನಾಥ (ಆ) ಆದಿನಾಥ (ಇ) ನೇಮಿನಾಥ (ಈ) ಪಾರ್ಶ್ವನಾಥ

I-7. ಜಗದೇಕಮಲ್ಲನ ಆಸ್ಥಾನದ ಸಂಧಿ ವಿಗ್ರಹಿಯಾಗಿದ್ದವನು
(ಅ) ದುರ್ಗಸಿಂಹ (ಆ) ಪೊನ್ನ (ಇ) ನಾಗಚಂದ್ರ (ಈ) ಪಂಪ

QP CODE: 30630

I-8. ಕನ್ನಡದ ಮೊದಲ ಗದ್ಯ ಕೃತಿ
(ಅ) ಪಂಪಭಾರತ (ಆ) ವಡ್ಡಾರಾಧನೆ (ಇ) ಪಂಚತಂತ್ರ (ಈ) ಗದಾಯುದ್ಧ

I-9. ವಾಮರಥನ ಮಡದಿ
(ಅ) ಯಶೋಮತಿ (ಆ) ಚಂದ್ರಮತಿ (ಇ) ಬಂಧುಮತಿ (ಈ) ಶ್ರೀಮತಿ

I-10. ಅಭಿನವ ಪಂಪ
(ಅ) ನೇಮಿಚಂದ್ರ (ಆ) ನಾಗಚಂದ್ರ (ಇ) ನಾಗವರ್ಮ (ಈ) ರನ್ನ

ವಿಭಾಗ - II

II. ಈ ಕೆಳಗಿನ ಯಾವುದಾದರೂ ಐದು ವಿಷಯಗಳಿಗೆ ಟಿಪ್ಪಣಿ ಬರೆಯಿರಿ. **(5x3=15)**

II-1. ದುರ್ಯೋಧನ
II-2. ಅಭಿಮನ್ಯು
II-3. ನಯಸೇನ
II-4. ಬಹುಪತ್ನಿತ್ವ
II-5. ಸತಿಪದ್ಧತಿ
II-6. ನಾಗಶ್ರೀ
II-7. ತಳವಾರ
II-8. ಶಿವಕೋಟ್ಯಾಚಾರ್ಯ

ವಿಭಾಗ - III

III. ಕೆಳಗಿನ ಪ್ರಶ್ನೆಗಳಲ್ಲಿ ಮೂರಕ್ಕೆ ನಿಖರವಾದ ಉತ್ತರ ಬರೆಯಿರಿ. **(3x5=15)**

III-1. ದುರ್ಯೋಧನ ವಿಲಾಪವನ್ನು ಕುರಿತು ಬರೆಯಿರಿ.

III-2. ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಮೂಡಿಬಂದ 'ಮಾನವೀಯ ಮಾಲ್ಯ'ವನ್ನು ವಿವೇಚಿಸಿ.

III-3. ಪ್ರಭುತ್ವದ ಅರ್ಥ - ಸ್ವರೂಪವನ್ನು ಕುರಿತು ಬರೆಯಿರಿ.

III-4. ಪ್ರಾಚೀನ ಕನ್ನಡ ಕಾವ್ಯಗಳಲ್ಲಿನ ಹೆಣ್ಣಿನ ನಿರೂಪಣೆಯನ್ನು ಪ್ರಸ್ತುತಪಡಿಸಿ.

III-5. ಭರತ ಚಕ್ರಿಯ ಗರ್ವ ಕಳೆಗುಂದಿದ ಬಗೆಯನ್ನು ವಿವರಿಸಿ.

ವಿಭಾಗ - IV

IV. ಈ ಕೆಳಗಿನ ಪ್ರಶ್ನೆಗಳಿಗೆ ವಿವರವಾದ ಉತ್ತರವನ್ನು ಬರೆಯಿರಿ. **(2x10=20)**

IV-1. ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಮೂಡಿ ಬಂದ ಪ್ರಭುತ್ವದ ಪರ ಮತ್ತು ವಿರೋಧಿ ಧೋರಣೆಗಳನ್ನು ವಿವರಿಸಿ.

ಅಥವಾ

'ಯಶೋಧರ ಚರಿತೆ'ಯಲ್ಲಿ ಕಾಣುವ ಸ್ತ್ರೀ ಪಾತ್ರಗಳ ಕುರಿತು ಬರೆಯಿರಿ.

IV-2. ವಿದ್ಯುಚ್ಚೋರ ರಿಸಿಯ ಕಥೆಯ ಸ್ವಾರಸ್ಯವನ್ನು ಕುರಿತು ಬರೆಯಿರಿ.'

ಅಥವಾ

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಮೂಡಿ ಬಂದ ಜೀವಪರ ಕಾಳಜಿ ಕುರಿತು ವಿವರಿಸಿ.

* * *